ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಮಳವಳ್ಳಿ

ಸಿ.ಸಿ ನಂ:1943/2017

ಪಿಡಬ್ಲೂ: 4 ಸಿಡಬ್ಲೂ: 7

ಸಾಕ್ಷಿಯನ್ನು ತಾ: 22.02.2024 ರಂದು ಪ್ರಮಾಣ ಮಾಡಿಸಲಾಯಿತು

| | |
|---|---|
| ಸಾಕ್ಷಿದಾರರ ಹೆಸರು | ಮಹದೇವಯ್ಯ |
| ತಂದೆಯ ಹೆಸರು | ಗುಡ್ಡಯ್ಯ |
| ವಯಸ್ಸು | 54 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ನೆಟ್ಕಲ್ ಗ್ರಾಮ. |

**ಮುಖ್ಯ ವಿಚಾರಣೆ: ಶ್ರೀ ಸ.ಸ.ಅ ರವರಿಂದ**

1. ಚಾಸಾ-1 ಮತ್ತು 8 ಗೊತ್ತಿಲ್ಲ. ಆರೋಪಿಗಳು ಗೊತ್ತಿಲ್ಲ.

2. ಈಗ ಒಂದು ದಾಖಲಾತಿ ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದು ಮಹಜರ್ ಆಗಿದ್ದು ಅದನ್ನು ನಿ.ಪಿ-4 ಎಂದು ಗುರುತಿಸಲಾಗಿದೆ. ನಿ.ಪಿ-4 ರಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ-4(ಎ) ಎಂದು ಗುರುತಿಸಲಾಯಿತು. ನಿ.ಪಿ-4 ಕ್ಕೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಿ.ಪಿ-4 ರ ಸಂಗತಿಗಳು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಶ್ರೀ ಸ ಸ ಅ ರವರು ಅನುಮತಿಯನ್ನು ಕೋರುತ್ತಾರೆ. ಕಡತವನ್ನು ಪರೀಕ್ಷಿಸಲಾಗಿ ಸಾಕ್ಷಿಯು ಮಹಜರುದಾರನಾಗಿದ್ದು ತನ್ನ ಮಹಜರಿಗೆ ವಿರುದ್ದ ಸಾಕ್ಷ್ಯವನ್ನು ನುಡಿಯುತ್ತಿದ್ದಾರೆ ಆದರಿಂದ ಅವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು.)

**ಪಾಟೀಸವಾಲು: ಶ್ರೀ ಸ.ಸ.ಅ. ರವರಿಂದ:**

3. ದಿನಾಂಕ 28.05.2017 ರಂದು ಬೆಳಿಗ್ಗೆ 07.00 ರಿಂದ 07.45 ಗಂಟೆಯವರೆಗೆ ಚಾಸಾ-1 ರವರು ಸ್ಥಳ ತೋರಿಸಿದ ಮೇರೆಗೆ ಪೊಲೀಸರು

ನನ್ನ ಮತ್ತು ಚಾಸಾ-1 ಮತ್ತು 8 ರವರ ಸಮಕ್ಷಮ ನಿ.ಪಿ-4 ರಂತೆ ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಒಂದು 90 ಎಂ ಎಲ್ ನ 8 ಖಾಲಿ ಒರಿಜಿನಲ್ ಚಾಯ್ಸ್ ವಿಸ್ಕಿ ಟೆಟ್ರಾ ಪ್ಯಾಕುಗಳು ಮತ್ತು 90 ಎಂ ಎಲ್ ನ 3 ಮದ್ಯ ತುಂಬಿದ ಒರಿಜಿನಲ್ ಚಾಯ್ಸ್ ವಿಸ್ಕಿ ಟೆಟ್ರಾ ಪ್ಯಾಕುಗಳು ಹಾಗೂ ಒಂದು ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಒಂದು 90 ಎಂ ಎಲ್ ನ 8 ಖಾಲಿ ಒರಿಜಿನಲ್ ಚಾಯ್ಸ್ ವಿಸ್ಕಿ ಟೆಟ್ರಾ ಪ್ಯಾಕುಗಳು ಮತ್ತು 90 ಎಂ ಎಲ್ ನ 3 ಮದ್ಯ ತುಂಬಿದ ಒರಿಜಿನಲ್ ಚಾಯ್ಸ್ ವಿಸ್ಕಿ ಟೆಟ್ರಾ ಪ್ಯಾಕುಗಳು ಹಾಗೂ ಒಂದು ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರನ್ನು ಈಗ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಾನು ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ- ಆರೋಪಿ ಪರ ವಕೀಲರಿಂದಃ- ಇಲ್ಲ**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ